76

155 ನೆ ೮ ಕ ನಿ = 3302 76 4/K 3008

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಎಂ.ನಾಗರಾಜು ಇವರು ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ವಿಷಯ:**

ಜಯಪ್ರಕಾಶ ಹೆಗ್ಡೆ, ಅಧ್ಯಕ್ಷರು, ಹಿಂದುಳಿದ ವರ್ಗಗಳ ಆಯೋಗ , ಕರ್ನಾಟಕ ಸರ್ಕಾರ ರವರು ಕಾಡುಗೊಲ್ಲ ಸಮುದಾಯದ ಜನಾಂಗವನ್ನು ಅಲೆಮಾರಿ-ಅರೆಅಲೆಮಾರಿ ವರ್ಗಕ್ಕೆ ಸೇರಿಸಲು ಶಿಫಾರಸ್ಸು ಮಾಡಿದ್ದು, ಸದರಿ ಶಿಫಾರಸ್ಸುಗಳನ್ನು ಅಳವಡಿಸಿಕೊಳ್ಳಲು ಕಡತವನ್ನು ಕಳೆದ 3 ವರ್ಷಗಳಿಂದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬಾಕಿ ಇಟ್ಟಿರುವ ಕುರಿತು ನಿಯಮ-72ರಲ್ಲಿ ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:**

ಭಾರತದ ಸಂವಿಧಾನದ ಅನುಚ್ಛೇದ 15(4) ರಂತೆ ಶೈಕ್ಷಣಿಕ ಸೌಲಭ್ಯಕ್ಕಾಗಿ ಮತ್ತು 16(4) ರಂತೆ ಉದ್ಯೋಗ ನೇಮಕಾತಿಗಳಲ್ಲಿ ಮೀಸಲಾತಿ ಕಲ್ಪಿಸಲು ಸರ್ಕಾರಿ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ:30.03.2002ರಲ್ಲಿನ ಪ್ರವರ್ಗ-1ರ ಕ್ರಮ ಸಂಖ್ಯೆ:86( ಡಬ್ಲ್ಯೂ) ನಂತರ ಕ್ರಮ ಸಂಖ್ಯೆ: 86 (ಎಕ್ಸ್) ರಲ್ಲಿ "**ಕಾಡುಗೊಲ್ಲ**" ಹಾಗೂ 86 (ವೈ) ರಲ್ಲಿ "**ಹಟ್ಟಿಗೊಲ್ಲ**" ಎಂಬ ಪರ್ಯಾಯ ಪದಗಳನ್ನು ಸೇರ್ಪಡೆ ಮಾಡಿ ದಿನಾಂಕ:29.01.2018 ರಂದು ಆದೇಶಿಸಲಾಗಿದೆ.

ಮುಂದುವರೆದು, ಹಿಂದುಳಿದ ವರ್ಗಗಳ ಆಯೋಗವು ಕಾಡುಗೊಲ್ಲ ಸಮುದಾಯದವರಿಂದ ಕಾಡುಗೊಲ್ಲ ಸಮುದಾಯವನ್ನು ಅಲೆಮಾರಿ-ಅರೆಅಲೆಮಾರಿ ಪಟ್ಟಿಗೆ ಸೇರಿಸುವ ಮನವಿಯನ್ನು ಸ್ವೀಕರಿಸಲಾಗಿ, ಶ್ರೀ ಕೆ. ಜಯಪ್ರಕಾಶ ಹೆಗ್ಡೆರವರ ನೇತೃತ್ವದಲ್ಲಿ ದಿನಾಂಕ:22.10.2021 ರಂದು ಬಹಿರಂಗ ವಿಚಾರಣೆ ಏರ್ಪಡಿಸಲಾಗಿರುತ್ತದೆ. ಬಹಿರಂಗ ವಿಚಾರಣೆಯಲ್ಲಿ ಕಂಡುಬಂದ ಅಂಶಗಳು ಹಾಗೂ ಸ್ಥಳ ಪರಿಶೀಲನೆಯಲ್ಲಿ ಕಂಡು ಬಂದ ಅಂಶಗಳ ಆಧಾರದ ಮೇಲೆ ಹಿಂದುಳಿದ ವರ್ಗಗಳ ಆಯೋಗವು ಪ್ರಥಮ ವರದಿ-2022ರಲ್ಲಿ ಕಾಡುಗೊಲ್ಲ ಸಮುದಾಯ ಸೇರಿದಂತೆ ಒಟ್ಟು 17 ಸಮುದಾಯಗಳ ಸಲಹೆ/ಶಿಫಾರಸ್ಸುಗಳ ವರದಿಯನ್ನು ದಿನಾಂಕ:08.03.2023 ರಂದು ಸಲ್ಲಿಸಿರುತ್ತದೆ. ಸದರಿ ಸಲಹೆ/ಶಿಫಾರಸ್ಸುಗಳ ವರದಿಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

**<u>ಸಂಖ್ಯೆ:</u>ಹಿಂವಕ 104 ಬಿಸಿಎ 2025**

(ಶಿವರಾಜ ಎಸ್. ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು